

## ಬರಗೂರರ ಭಾಗೀರತಿ

ಈ ನೆಲದ ಕಥೆಗಳನ್ನು, ಮುಖ್ಯ ವಾಹಿನಿಯಿಂದ ದೂರವೇ ಉಳಿದವರ ತವಕ ತಲ್ಲಣಗಳನ್ನು ಸಿನಿಮಾ ಆಗಿಸುವಲ್ಲಿ ಸಿದ್ಧಹಸ್ತರಾದ ಬರಗೂರು ರಾಮಚಂದ್ರಪ್ಪನವರ ಹೊಸ ಚಿತ್ರದ ಹೆಸರು 'ಭಾಗೀರತಿ'. ಕನ್ನಡ ಜಾನಪದದ ಅನರ್ಘ್ಯ ಕಥನಗಳಲ್ಲಿ 'ಕೆರೆಗೆ ಹಾರ'ವೂ ಒಂದು. ಈ ಕಥನವೇ ಬರಗೂರರ 'ಭಾಗೀರತಿ'. 'ಕೆರೆಗೆ ಹಾರ' ಎನ್ನುವ ಶೀರ್ಷಿಕೆಯನ್ನು ಈಗಾಗಲೇ ಬೇರೆಯವರು ನೋಂದಾಯಿಸಿರುವುದರಿಂದ, ಕಥಾನಾಯಕಿಯ ಹೆಸರನ್ನೇ ಬರಗೂರರು ತಮ್ಮ ಚಿತ್ರದ ಹೆಸರಾಗಿಸಿದ್ದಾರೆ.

'ಭಾಗೀರತಿ' ಕಥನಕ್ಕೆ ವಿಶಿಷ್ಟ ಆಯಾಮಗಳಿವೆ. ಹೆಂಡತಿಯನ್ನು ಕಳಕೊಂಡ ಮಾದೇವರಾಯ ತಾನೂ ಆತ್ಮಾರ್ಪಣೆ ಮಾಡಿಕೊಳ್ಳುವ ಈ ಕಥನ, ಪ್ರೇಮದ ಹೊಸ ಮಾದರಿಯೊಂದನ್ನು ಚಿತ್ರಿಸುತ್ತದೆ. ಇದೊಂದು ಅನನ್ಯ ಪ್ರೇಮಕಥೆ ಆಗಿರುವಂತೆಯೇ ಹೆಣ್ಣೊಬ್ಬಳ ತಣ್ಣನೆ ಪ್ರತಿಭಟನೆಯನ್ನೂ ತನ್ನೊಳಗೆ ಅಡಗಿಸಿಕೊಂಡಿರುವ ಕಥನ. ಆಧುನಿಕತೆಗೆ ಕೆರೆಗಳೇ ಹಾರವಾಗುತ್ತಿರುವ ಸಂದರ್ಭದಲ್ಲಿ, ಕೆರೆಯನ್ನೇ ಒಂದು ರೂಪಕವಾಗಿಸಿ ಬರಗೂರರು ಸಿನಿಮಾ ಮಾಡಿದ್ದಾರೆ.

ಭಾಗೀರತಿಯ ಪಾತ್ರದಲ್ಲಿ ಭಾವನಾ ಹಾಗೂ ಮಾದೇವರಾಯನ ಪಾತ್ರದಲ್ಲಿ ಕಿಶೋರ್ ನಟಿಸಿದ್ದಾರೆ. ಶ್ರೀನಾಥ್, ಹೇಮಾ ಚೌಧುರಿ, ತಾರಾ, ಪದ್ಮಾ ವಾಸಂತಿ ಮುಂತಾದ ನುರಿತ ಕಲಾವಿದರು ತಾರಾಗಣದಲ್ಲಿದ್ದಾರೆ. ವಿಶೇಷ ಪಾತ್ರದಲ್ಲಿ ನಟಿಸಿರುವ ನಟ ರವಿಶಂಕರ್, ಒಂದು ಗೀತೆಯನ್ನೂ ಹಾಡಿದ್ದಾರಂತೆ.



## ಬೆಂಗಳೂರು ಮತ್ತು ಬಾಬು!

ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ಸಿಕ್ಕಾಪಟ್ಟೆ ಬೇಸರದ ಮೂಡಿನಲ್ಲಿದ್ದರು. ಅವರ ಬೇಸರಕ್ಕೆ ಕಾರಣ ಬೆಂಗಳೂರು!

'ಈ ಊರಲ್ಲಿ ಸಿನಿಮಾ ಮಾಡೋದು ಅಂದರೆ ನರಕವಿದ್ದಂತೆ. ಬೆಂಗಳೂರಲ್ಲಿ ಚಿತ್ರೀಕರಣ ಮಾಡೋದು ಕನ್ನಡ ಚಿತ್ರೋದ್ಯಮಕ್ಕೆ ಶಾಪವಿದ್ದಂತೆ. ಶೂಟಿಂಗ್‌ಗೆ ಮನೆಗಳು ಸಿಗೊಲ್ಲ. ಇರುವ ಸ್ಟುಡಿಯೋಗಳನ್ನೆಲ್ಲ ಕಿರುತೆರೆ ಕಾರ್ಯಕ್ರಮಗಳು ಆವರಿಸಿಕೊಂಡಿವೆ. ಟ್ರಾಫಿಕ್‌ನಲ್ಲೇ ನಮ್ಮ ಸೃಜನಶೀಲತೆ ಸತ್ತು ಹೋಗ್ತಿದೆ. ಮೈಸೂರಿನಲ್ಲಿ ಉದ್ಯಮ ನೆಲೆಯಾಗಿದ್ದಾಗ ಇದೆಲ್ಲ ಸಮಸ್ಯೆಯೇ ಇರಲಿಲ್ಲ. ಬೆಂಗಳೂರಿನಲ್ಲಿ ಚಿತ್ರೋದ್ಯಮ ಮುಖ ಮಾಡಿತು ನೋಡಿ, ಒಂದಲ್ಲಾ ಒಂದು ಸಮಸ್ಯೆಗಳು...'.

ಬೆಂಗಳೂರು ಮೀಮಾಂಸೆಯಿಂದ ಬಾಬು ತಮ್ಮ ಚಿತ್ರ 'ರೆಬೆಲ್'ನತ್ತ ಹೊರಳಿದರು. ಆದಿತ್ಯ ನಾಯಕನಾಗಿ ಅಭಿನಯಿಸುತ್ತಿರುವ 'ರೆಬೆಲ್'ಗೆ ಈಗಾಗಲೇ ಮೂವತ್ತೈದು ದಿನಗಳ ಶೂಟಿಂಗ್ ನಡೆದಿದೆಯಂತೆ. ಅಷ್ಟೇ ದಿನದ ಚಿತ್ರೀಕರಣ ಬಾಕಿಯಿದೆಯಂತೆ. ಆದರೂ ಇನ್ನೂ ನಾಯಕಿ ಸಿಕ್ಕಿಲ್ಲವಂತೆ! ಹಾಂ, 2012ರ ಜನವರಿ ಇಪ್ಪತ್ತಾರರಂದು 'ರೆಬೆಲ್' ತೆರೆ ಕಾಣಿಸುವುದು ಬಾಬು ಬಳಗದ ಉದ್ದೇಶ.



## ಗುಬ್ಬಿಯ ಪ್ರೀತಿಗೂಡಿನಲ್ಲಿ..

'ಜಾನಿ ಮೇರಾ ನಾಮ್' ನೂರು ದಿನ ಪೂರೈಸುವುದರ ಬೆನ್ನಿಗೇ ನಿರ್ದೇಶಕ ಪ್ರೀತಂ ಗುಬ್ಬಿ ಮತ್ತೊಂದು ಚಿತ್ರ ಒಪ್ಪಿಕೊಂಡಿದ್ದಾರೆ. 'ಪರಮಾತ್ಮ' ಚಿತ್ರದ ನಿರ್ಮಾಪಕ ಜಯಣ್ಣ ಈ ಚಿತ್ರದ ನಿರ್ಮಾಪಕರು. ತಮ್ಮ ಹೊಸ ಚಿತ್ರಕ್ಕೆ ಪ್ರೀತಂ ಯುವಜೋಡಿಯನ್ನು ಆರಿಸಿಕೊಂಡಿದ್ದಾರೆ. 'ಕಿರಾತಕ' ಯಶಸ್ಸಿನ ಯಶ್ ಹಾಗೂ ಒಂದೂ ಸಿನಿಮಾ ತೆರೆ ಕಾಣದೆಯೂ ಸುದ್ದಿಯಲ್ಲಿರುವ ದೀಪಾ ಸನ್ನಿಧಿ ಗುಬ್ಬಿಗೂಡಿನಲ್ಲಿರುವ ಹೊಸ ಜೋಡಿ.

ಅಂದ ಹಾಗೆ, ಪ್ರೀತಂರ ಹೊಸಚಿತ್ರ ಸದ್ಯಕ್ಕೆ ಆರಂಭವಾಗುತ್ತಿಲ್ಲ. ಪ್ರಸ್ತುತ ಯಶ್ 'ಲಕ್ಕಿ' ಎನ್ನುವ ಚಿತ್ರದಲ್ಲಿ ನಟಿಸುತ್ತಿದ್ದಾರೆ. ನಿವೃತ್ತಿಯ ಹಾದಿಯಲ್ಲಿರುವ ನಟಿ ರಾಧಿಕಾ ನಿರ್ಮಾಣದ ಈ ಚಿತ್ರದಲ್ಲಿ ಯಶ್‌ಗೆ ನಾಯಕಿಯಾಗಿ ರಮ್ಯಾ ಕಾಣಿಸಿಕೊಳ್ಳುತ್ತಿರುವುದು ವಿಶೇಷ. 'ಲಕ್ಕಿ'ಯ ನಂತರವೇ ಪ್ರೀತಂ ಹೊಸ ಚಿತ್ರ ಆರಂಭವಾಗುವುದಂತೆ.

■ ರಘು